ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ. ಎಂ. ಎಫ್.ಸಿ., ನ್ಯಾಯಾಲಯ ಚನ್ನಪಟ್ಟಣ
ಚನ್ನಪಟ್ಟಣ.

**ಸಿ.ಸಿ. ಸಂಖ್ಯೆ 173/2017**

ಚಾಸಾಃ 4 ಫ್ರಾಸಾಃ5

| | | |
|---|---|---|
| ಹೆಸರು | : | ಮನು |
| ಗಂಡನ/ತಂದೆಯ ಹೆಸರು | : | ರಾಮಯ್ಯ |
| ವಯಸ್ಸು | : | 36 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ | : | ಬೇವೂರು |

ದಿನಾಂಕ 03.12.2024 ರಂದು ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ

ಆರೋಪಿತರ ಪರಿಚಯವಿದೆ. ಚಾಸಾ*1* ಮತ್ತು *2* ರವರ ಪರಿಚಯವಿದೆ. ಸುಮಾರು *6-7* ವರ್ಷಗಳ ಹಿಂದೆ ಚಾಸಾ*1* ಮತ್ತು *2* ರವರು ಅವರ ಮನೆಯ ಹತ್ತಿರ ಇದ್ದು, ಅವರಿಗೆ ಏಟಾಗಿದ್ದು, ನಾನು ಅವರನ್ನು ನನ್ನ ಬೈಕಿನಲ್ಲಿ ಚನ್ನಪಟ್ಟಣ ಸರ್ಕಾರಿ ಆಸ್ಪತ್ರೆ ಕರೆದುಕೊಂಡು ಹೋಗಿರುತ್ತೇನೆ. ಅವರಿಗೆ ಹೇಗೆ ಏಟಾಯಿತು ಎಂದು ವಿಚಾರ ಮಾಡಿಲ್ಲ. ಆರೋಪಿತರು ಚಾಸಾ*1* ಮತ್ತು *2* ರವರಿಗೆ ಅವಾಚ್ಯವಾಗಿ ಅವಾಚ್ಯವಾಗಿ ನಿಂದಿಸಿರುವುದನ್ನು ನೋಡಿಲ್ಲ. ಕೊಲೆಬೆದರಿಕೆ ಹಾಕಿರುವುದನ್ನು ಮತ್ತು ಹಲ್ಲೆ ಮಾಡಿರುವುದನ್ನು ನೋಡಿಲ್ಲ. ನ್ಯಾಯಾಲಯದ ಮುಂದೆ ಇರುವ ದೊಣ್ಣೆಯನ್ನು ಮತ್ತು ಕಬ್ಬಿಣದ ಪೈಪನ್ನು ಅನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ. ಪೋಲಿಸರಿಗೆ ಘಟನೆಯ ಬಗ್ಗೆ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಸಂಪೂರ್ಣ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ ರವರು ಅನುಮತಿ ಕೋರಿರುತ್ತಾರೆ ಅನುಮತಿಸಲಾಯಿತು).

ಪಾಟೀ ಸವಾಲುಃ ಎಪಿಪಿಯವರಿಂದಃ

ದಿನಾಂಕ 07.11.2016 ರಂದು ಬೆಳಗ್ಗೆ 7.00 ಗಂಟೆಯ ಸಮಯದಲ್ಲಿ

ಚಾಸಾ2 ರವರ ಮನೆಯ ಬಳಿ ಕೂಗಾಡಿದ ಶಬ್ದ ಕೇಳಿ ನಾನು ಅಲ್ಲಿಗೆ ಹೋಗಿದ್ದು, ಅಲ್ಲಿ ಚಾಸಾ1 ರಿಂದ 3 ರವರು ಕೆಳಗೆ ಬಿದ್ದಿದ್ದ ಕರಿಮಣಿ ಸರ, ತಾಳಿ, ಗುಂಡು,ಕಿವಿ ಓಲೆ ಮತ್ತು ಹಣವನ್ನು ಎತ್ತಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸ್ಥಳದಲ್ಲಿ ನ್ಯಾಯಾಲಯದ ಮುಂದೆ ಇರುವ ದೊಣ್ಣೆ ಮತ್ತು ಕಬ್ಬಿಣದ ಪೈಪು ಬಿದ್ದಿದ್ದು ಚಾಸಾ2 ರವರ ಬಲಕೆನ್ನೆಗೆ ಏಟಾಗಿ ಹಲ್ಲಿನಿಂದ ರಕ್ತ ಬರುತ್ತಿತ್ತು ಎಂದರೆ ಸರಿಯಲ್ಲ. ಚಾಸಾ2 ರವರು ಬಲಕಾಲಿಗೆ ಏಟಾಗಿತ್ತು ನೋವು ಎಂದು ತಿಳಿಸಿರುತ್ತಾರೆಂದರೆ ಸರಿಯಲ್ಲ. ನಾನು ಗಲಾಟೆಯ ಬಗ್ಗೆ ಚಾಸಾ1 ರವರನ್ನು ವಿಚಾರಿಸಿದಾಗ ನಮ್ಮ ಮನೆಯ ಮಧ್ಯೆ ಇರುವ 3 ಅಡಿ ಜಾಗದಲ್ಲಿ ನಾವು ಹಸುಗಳನ್ನು ತೆಗೆದುಕೊಂಡು ಹೋಗುವಾಗಿ ಆರೋಪಿತರು ಹಸುಗಳನ್ನು ಹೊಡೆದುಕೊಂಡು ಹೋಗಬೇಡಿ ಎಂದು ಜಗಳ ತೆಗೆದು, ಬೆಳಗ್ಗೆ 7.00 ಗಂಟೆಯ ಸಮಯದಲ್ಲಿ ನಮ್ಮನ್ನು ಅವಾಚ್ಯವಾಗಿ ನಿಂದಿಸಿ ತಲೆಯ ಜುಟ್ಟನ್ನು ಹಿಡಿದು, ದೊಣ್ಣೆಯಿಂದ ಹೊಡೆದು ಗಾಯ ಮಾಡಿರುತ್ತಾರೆಂದು ತಿಳಿಸಿರುತ್ತಾರೆಂದರೆ ಸರಿಯಲ್ಲ. ಆ ಸಮಯದಲ್ಲಿ ಜಗದೀಶ ಎನ್ನುವವರು ಅಲ್ಲಿಗೆ ಬಂದಾಗ ಆರೋಪಿತರೆಲ್ಲರೂ ಅವರನ್ನು ಬಾಗಿಲ ಹತ್ತಿರ ಎಳೆದು ಕಬ್ಬಿಣ ಪೈಪ್ ಮತ್ತು ದೊಣ್ಣೆಯಿಂದ ಹೊಡೆದು, 1 ನೇ ಆರೋಪಿ ಚಾಸಾ-2 ರವರ ಬಲಕೆನ್ನೆಗೆ ಕೆಚ್ಚಿ ರಕ್ತ ಗಾಯ ಪಡಿಸಿರುತ್ತಾರೆಂದರೆ ಸರಿಯಲ್ಲ. ಈಗ ಓದಿ ಹೇಳಿದಂತೆ ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಹೇಳಿಕೆಯ ಭಾಗವನ್ನು ನಿಪಿ-4 ಎಂದು ಗುರುತಿಸಲಾಯಿತು. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ಆರೋಪಿ ಪರ ವಕೀಲರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ನುಡಿಯುತ್ತಾರೆ

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

(ವೆಂಕಟೇಶಪ್ಪ. ವಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.